ಗಾಜನೂರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ

2887- ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಿವಮೊಗ್ಗ ತಾಲ್ಲೂಕು ಗಾಜನೂರು ಅಣೆಕಟ್ಟು ವಿಭಾಗದ ವ್ಯಾಪ್ತಿಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿಯು ಯಾವ ಹಂತದಲ್ಲಿದೆ?

ಆ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಸದ್ಯಕ್ಕೆ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಹಿಂದಿ ಬಿ.ಎಡ್ ಆದವರಿಗೆ ಆದ್ಯತೆ ಕಲ್ಪಿಸುವುದು

2888 - ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೂಗ್ಗ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಿ.ಎಡ್. ಪದವಿ ಹೊಂದಿರುವವರ ಸಂಖ್ಯೆ ಎಷ್ಟು?

ಆ) ಹಿಂದಿ ಬಿ.ಎಡ್. ಪದವೀಧರರಿಗೆ ರಾಜ್ಯದ ಪ್ರೌಢಶಾಲೆಗಳಲ್ಲಿ ಎಷ್ಟು ಜನರಿಗೆ ಉದ್ಯೋಗಾವಕಾಶ ನೀಡಲಾಗಿದೆ?

ಇ) ಇವರ ನೇಮಕಾತಿಗೆ ಇರುವ ನೀತಿ ನಿಯಮಗಳೇನು?

ಈ) ಸರ್ಕಾರಿ ಶಾಲೆಗಳ ದುರಸ್ತಿಗೆ ಅನುದಾನವಿದೆಯೇ?

ಉ) ಇದುವರೆವಿಗೂ ಸರ್ಕಾರಿ ಶಾಲೆಗಳ ದುರಸ್ತಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ್ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 5277

ಆ) ಕಳೆದ 6 ವರ್ಷಗಳಲ್ಲಿ 1417 ಹಿಂದಿ ಬಿ.ಎಡ್. ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದ ಪದವೀಧರರಿಗೆ ಹಿಂದಿ ಶಿಕ್ಷಕರಾಗಿ ಸರ್ಕಾರಿ ಪ್ರೌಢಶಾಲೆದಗಳಲ್ಲಿ ನೇಮಿಸಿಕೊಳ್ಳಲಾಗಿದೆ.

ಇ) ಪದವಿಯಲ್ಲಿ ಅಭ್ಯರ್ಥಿಯು ಹಿಂದಿ ವಿಷಯವನ್ನು ಐಚ್ಛಿಕ ವಿಷಯವನ್ನಾಗಿ ಓದಿ ಪದವಿ ಪಡೆದಿರಬೇಕು ಮತ್ತು ಬಿ.ಇಡಿ ತರಬೇತಿ ಹೊಂದಿರಬೇಕು ಅಥವಾ ಹಿಂದಿ ತತ್ಸಮಾನ ಪದವಿ ಹಾಗೂ ಬಿ.ಇಡಿ ತರಬೇತಿ ಹೊಂದಿರಬೇಕು.